# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1197
2. ಮಾನ್ಯ ವಿಧಾನ ಪರಿಷತ್ತು ಸದಸ್ಯರ ಹೆಸರು : ಶ್ರೀ ಬಿ.ಕೆ. ಹರಿಪ್ರಸಾದ್ (ವಿಧಾನ ಸಭೆಯಿಂದ ಚುನಾಯಿತರಾದವರು)
3. ಉತ್ತರಿಸುವ ದಿನಾಂಕ : 23.12.2021.
4. ಉತ್ತರಿಸುವ ಸಚಿವರು : ಗೃಹ ಸಚಿವರು.

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ರಾಜ್ಯಾದ್ಯಂತ ಮಾದಕ ವಸ್ತುಗಳ ಹಾವಳಿ ಜಾಸ್ತಿಯಾಗಿದ್ದು, ಇತ್ತೀಚೆಗೆ ಅನೇಕ ಪೊಲೀಸ್ ದಾಳಿಗಳಲ್ಲಿ ಕೋಟ್ಯಾಂತರ ರೂಪಾಯಿ ಬೆಲೆಬಾಳುವ ಅಧಿಕ ಪ್ರಮಾಣದ ಮಾದಕ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆಯೇ; ಈ ಕುರಿತಂತೆ 2020-21ನೇ ಸಾಲಿನಲ್ಲಿ ಎಷ್ಟು ಮಂದಿ/ಜನರ ವಿರುದ್ಧ ಪ್ರಕರಣಗಳಿವೆ; ಹಾಗೂ ಎಷ್ಟು ಕೋಟಿ ಮೌಲ್ಯದ ಮಾದಕ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ; (ಸಂಪೂರ್ಣ ಮಾಹಿತಿ ನೀಡುವುದು)</td><td>ರಾಜ್ಯದಲ್ಲಿ ಮಾದಕ ವಸ್ತುಗಳ ಹಾವಳಿ ಕುರಿತಂತೆ ಎನ್.ಡಿ.ಪಿ.ಎಸ್ ಕಾಯ್ದೆ ಅಡಿಯಲ್ಲಿ ಕಳೆದ 2020 ಮತ್ತು 2021ನೇ ಸಾಲಿನಲ್ಲಿ ನವೆಂಬರ್ 30ರವರೆಗೆ ದಾಖಲಿಸಿರುವ ದೂರು/ಎಫ್.ಐ.ಆರ್‌ಗಳ ವಿವರಗಳು ಮತ್ತು ವಶಪಡಿಸಿಕೊಂಡಿರುವ ಮಾದಕ ವಸ್ತುಗಳ ಪ್ರಮಾಣ, ಅದರ ಅಂದಾಜು ಮೌಲ್ಯ ಹಾಗೂ ಬಂಧಿಸಿರುವ ಆರೋಪಿಗಳ ವಿವರಗಳು ಈ ಕೆಳಕಂಡಂತಿರುತ್ತದೆ.<br><table><tr><th>ವರ್ಷ</th><th>ಪ್ರಕರಣಗಳ ಸಂಖ್ಯೆ</th><th>ಬಂಧಿಸಿರುವ ಆರೋಪಿಗಳ ಸಂಖ್ಯೆ</th><th>ವಶಪಡಿಸಿಕೊಂಡಿರುವ ಮಾದಕ ವಸ್ತುಗಳ ಪ್ರಮಾಣ (ಕೆ.ಜಿ.ಗಳಲ್ಲಿ)</th><th>ವಶ ಪಡಿಸಿಕೊಂಡಿರುವ ಮಾದಕ ವಸ್ತುಗಳ ಅಂದಾಜು ಮೌಲ್ಯ</th></tr><tr><td>2020</td><td>4066</td><td>5512</td><td>21571.2</td><td>37,64,70,043</td></tr><tr><td>2021 (ನವೆಂಬರ್)</td><td>4970</td><td>6330</td><td>8006.89</td><td>53,37,81,381</td></tr></table><br>ವರ್ಷವಾರು ಮತ್ತು ಜಿಲ್ಲಾವಾರು ಮಾಹಿತಿಯನ್ನು <u>ಅನುಬಂಧ-1ರಲ್ಲಿ</u> ನೀಡಿದೆ.</td></tr>
<tr><td>ಆ</td><td>ಬೆಂಗಳೂರು ನಗರದಾದ್ಯಂತ ಯುವ ಜನತೆ ಹಾಗೂ ವಿದ್ಯಾರ್ಥಿಗಳು ಮಾದಕ ವ್ಯಸನಿಗಳಾಗಿದ್ದು, ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಕುರಿತು ಸರ್ಕಾರ ಕೈಗೊಂಡ ಕ್ರಮಗಳಾವುವು;</td><td>ಬಂದಿದೆ.<br><br>ಬೆಂಗಳೂರು ನಗರದಲ್ಲಿ ಯುವ ಜನತೆ ಹಾಗೂ ವಿದ್ಯಾರ್ಥಿಗಳು ಮಾದಕ ವ್ಯಸನಿಗಳಾಗದಂತೆ ತಡೆಗಟ್ಟಲು ಸರ್ಕಾರವು ಕೈಗೊಂಡಿರುವ ಕ್ರಮಗಳ ವಿವರಗಳನ್ನು <u>ಅನುಬಂಧ-2ರಲ್ಲಿ</u> ಒದಗಿಸಲಾಗಿದೆ.</td></tr>
<tr><td>ಇ</td><td>ಬೆಂಗಳೂರು ನಗರದಾದ್ಯಂತ ಗಾಂಜಾ ವ್ಯಸನಿಗಳು ಜಾಸ್ತಿ ಆಗಿರುವುದರ ಜೊತೆಗೆ ಕಾನೂನು ಬಾಹಿರ ಹಾಗೂ ಸಮಾಜಘಾತುಕ ಚಟುವಟಿಕೆಗಳು ಜಾಸ್ತಿಯಾಗಿದ್ದು, ಈ ನಿಟ್ಟಿನಲ್ಲಿ ಸರ್ಕಾರವು</td><td>ಬೆಂಗಳೂರು ನಗರದ ಪೊಲೀಸ್ ಠಾಣೆಗಳ ವ್ಯಾಪ್ತಿಗಳಲ್ಲಿ ಹಾಗೂ ಸಿಸಿಬಿ ಘಟಕ ಸೇರಿದಂತೆ ಮಾದಕ ದ್ರವ್ಯ ಪದಾರ್ಥಗಳ ಸೇವನೆ ಮತ್ತು ಮಾರಾಟಗಾರರನ್ನು ನಿಯಂತ್ರಿಸಲು ಅವರುಗಳ ವಿರುದ್ಧ ಎನ್.ಡಿ.ಪಿ.ಎಸ್. ಕಾಯ್ದೆ ಅಡಿಯಲ್ಲಿ ಪ್ರಕರಣಗಳನ್ನು ದಾಖಲಿಸಿ, ಕಾನೂನು ಕ್ರಮ ಜರುಗಿಸಲಾಗುತ್ತಿದೆ.<br><br>ಬೆಂಗಳೂರು ನಗರ ವ್ಯಾಪ್ತಿಯ ಪೊಲೀಸ್ ಠಾಣೆಗಳಲ್ಲಿ 2020 ಮತ್ತು 2021ನೇ ಸಾಲಿನ ನವೆಂಬರ್ 30ರ ವರೆಗೆ ದಾಖಲಿಸಿರುವ ಪ್ರಕರಣಗಳು ಮತ್ತು ಬಂಧಿಸಿರುವ</td></tr>
</table>

| | | |
|---|---|---|
| | ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವುದೇ? (ಕೈಗೊಂಡಿದ್ದಲ್ಲಿ, ಸಂಪೂರ್ಣ ಮಾಹಿತಿ ಒದಗಿಸುವುದು) | ದೇಶೀಯರು ಮತ್ತು ವಿದೇಶಿ ಆರೋಪಿಗಳ ಸಂಖ್ಯೆ ಹಾಗೂ ವಶಪಡಿಸಿಕೊಂಡಿರುವ ಮಾದಕ ವಸ್ತುಗಳ ಪ್ರಮಾಣದ ವಿವರಗಳು ಈ ಕೆಳಕಂಡಂತೆ ಇರುತ್ತದೆ. |

| ವರ್ಷ | ಪ್ರಕರಣಗಳ ಸಂಖ್ಯೆ | ಬಂಧಿಸಿರುವ ಆರೋಪಿಗಳ ಸಂಖ್ಯೆ | | ವಶಪಡಿಸಿಕೊಂಡಿರುವ ಮಾದಕ ವಸ್ತುಗಳ ಪ್ರಮಾಣ (ಕೆಜಿಗಳಲ್ಲಿ) |
|---|---|---|---|---|
| | | ದೇಶೀಯರು | ವಿದೇಶೀಯರು | |
| 2020 | 2766 | 3589 | 84 | 3912.82 |
| 2021 (ನವೆಂಬರ್) | 3893 | 4762 | 158 | 3407.36 |

ಒಇ 35 ಪಿಎನ್‌ಡಿ 2021

(ಆರಗ ಜ್ಞಾನೇಂದ್ರ)
ಗೃಹ ಸಚಿವರು

ಅನುಬಂಧ-1

| ಕ್ರ. ಸಂ. | ಘಟಕದ ಹೆಸರು | 2020 | | | | 2021 (ನವೆಂಬರ್ 30 ) | | | |
|---|---|---|---|---|---|---|---|---|---|
| | | ಎನ್‌ಡಿಪಿಎಸ್ ಕಾಯ್ದೆಯಡಿ ದಾಖಲಿಸಿರುವ ಪ್ರಕರಣಗಳ ಸಂಖ್ಯೆ | ಬಂಧಿಸಿರುವವ ಸಂಖ್ಯೆ | ವಶಪಡಿಸಿಕೊಂಡಿರುವ ಮಾದಕ ವಸ್ತುಗಳ ಪ್ರಮಾಣ (ಕೆ.ಜಿ.ಯಲ್ಲಿ) | ಮಾದಕ ವಸ್ತುವಿನ ಅಂದಾಜು ಮೊತ್ತ | ಎನ್‌ಡಿಪಿಎಸ್ ಕಾಯ್ದೆಯಡಿ ದಾಖಲಿಸಿರುವ ಪ್ರಕರಣಗಳ ಸಂಖ್ಯೆ | ಬಂಧಿಸಿರುವವ ಸಂಖ್ಯೆ | ವಶಪಡಿಸಿಕೊಂಡಿರುವ ಮಾದಕ ವಸ್ತುಗಳ ಪ್ರಮಾಣ | ಮಾದಕ ವಸ್ತುವಿನ ಅಂದಾಜು ಮೊತ್ತ |
| 1 | ಬಾಗಲಕೋಟೆ | 20 | 41 | 42.74 | 270990 | 8 | 17 | 54.89 | 334515 |
| 2 | ಬಳ್ಳಾರಿ | 21 | 45 | 176.63 | 1436720 | 10 | 14 | 64.82 | 554230 |
| 3 | ಬೆಳಗಾವಿ ನಗರ | 15 | 38 | 44.66 | 481505 | 11 | 22 | 18 | 2322300 |
| 4 | ಬೆಳಗಾವಿ ಜಿಲ್ಲೆ | 57 | 99 | 639.65 | 4701673 | 25 | 37 | 171.42 | 515170 |
| 5 | ಬೆಂಗಳೂರು ನಗರ | 2766 | 3673 | 3910.16 | 213856550 | 3893 | 4920 | 3407.36 | 464209790 |
| 6 | ಬೆಂಗಳೂರು ಜಿಲ್ಲೆ | 53 | 97 | 249.3 | 3354008 | 55 | 91 | 280.39 | 7157672 |
| 7 | ಬೀದರ್ | 22 | 46 | 803.39 | 6009270 | 10 | 31 | 629.24 | 3850280 |
| 8 | ಚಾಮರಾಜನಗರ | 27 | 40 | 692.49 | 6075630 | 23 | 31 | 125.76 | 2508300 |
| 9 | ಚಿಕ್ಕಬಳ್ಳಾಪುರ | 28 | 46 | 163.385 | 3468500 | 23 | 45 | 93.48 | 3458700 |
| 10 | ಚಿಕ್ಕಮಗಳೂರು | 50 | 128 | 178.48 | 3064275 | 22 | 43 | 208.68 | 3688000 |
| 11 | ಚಿತ್ರದುರ್ಗ | 10 | 36 | 9942.18 | 40775600 | 6 | 14 | 44.93 | 891560 |
| 12 | ದಕ್ಷಿಣ ಕನ್ನಡ | 28 | 37 | 251.51 | 4337700 | 8 | 18 | 11.95 | 337775 |
| 13 | ದಾವಣಗೆರೆ | 19 | 39 | 40.55 | 634100 | 20 | 50 | 45.2 | 1154300 |
| 14 | ಧಾರವಾಡ | 19 | 24 | 41.08 | 230100 | 14 | 18 | 83.51 | 477400 |
| 15 | ಗದಗ | 10 | 18 | 22.51 | 477080 | 12 | 17 | 7.45 | 89710 |
| 16 | ಹಾಸನ | 33 | 78 | 166.76 | 1592010 | 38 | 70 | 17.47 | 294150 |
| 17 | ಹಾವೇರಿ | 8 | 8 | 9.71 | 73600 | 4 | 5 | 16.35 | 39000 |
| 18 | ಹುಬ್ಬಳ್ಳಿ-ಧಾರವಾಡ | 24 | 76 | 95.93 | 842034 | 45 | 83 | 49.87 | 1207352 |
| 19 | ಕೆ.ಜಿ.ಎಫ್. | 5 | 21 | 190.83 | 20856325 | 9 | 9 | 6.88 | 197000 |
| 20 | ಕಲಬುರಗಿ ನಗರ | 17 | 31 | 41.56 | 224400 | 13 | 34 | 677.89 | 4669800 |
| 21 | ಕಲಬುರಗಿ ಜಿಲ್ಲೆ | 28 | 33 | 917.28 | 2896700 | 14 | 22 | 477.65 | 1728400 |
| 22 | ಕರ್ನಾಟಕ ರೈಲ್ವೇಸ್ | 2 | 4 | 13.23 | 194950 | 12 | 12 | 93.16 | 1093800 |
| 23 | ಕೊಡಗು | 30 | 79 | 56.29 | 1257860 | 16 | 35 | 21.237 | 629260 |
| 24 | ಕೋಲಾರ | 17 | 26 | 93.268 | 3588750 | 25 | 39 | 214.8 | 6443060 |
| 25 | ಕೊಪ್ಪಳ. | 8 | 19 | 60.66 | 7350 | 3 | 9 | 2.86 | 18840 |
| 26 | ಮಂಡ್ಯ | 13 | 24 | 84.49 | 2089660 | 13 | 16 | 6.1 | 793800 |
| 27 | ಮಂಗಳೂರು ನಗರ | 189 | 66 | 204.15 | 2994560 | 288 | 114 | 336.61 | 7488430 |
| 28 | ಮೈಸೂರು ನಗರ | 27 | 61 | 62.35 | 13033770 | 20 | 35 | 47.67 | 1222375 |
| 29 | ಮೈಸೂರು ಜಿಲ್ಲೆ | 16 | 40 | 692.49 | 6075630 | 8 | 31 | 125.76 | 2508300 |
| 30 | ರಾಯಚೂರು | 22 | 29 | 198.76 | 672234 | 5 | 6 | 33.26 | 76750 |
| 31 | ರಾಮನಗರ | 34 | 64 | 181.2 | 5466900 | 32 | 49 | 79.17 | 2722351 |
| 32 | ಶಿವಮೊಗ್ಗ | 89 | 204 | 223.83 | 1703950 | 114 | 215 | 170.18 | 3015300 |
| 33 | ತುಮಕೂರು | 19 | 41 | 126.01 | 5137450 | 20 | 35 | 121.76 | 4855600 |
| 34 | ಉಡುಪಿ | 249 | 62 | 69.71 | 11205400 | 63 | 27 | 20.79 | 629810 |
| 35 | ಉತ್ತರ ಕನ್ನಡ | 31 | 68 | 42.77 | 903210 | 53 | 66 | 20.47 | 762300 |
| 36 | ವಿಜಯನಗರ | 17 | 30 | 414.5 | 1622825 | 12 | 17 | 41.38 | 899206 |
| 37 | ವಿಜಯಾಪುರ | 18 | 27 | 286.78 | 788919 | 19 | 31 | 177.15 | 915920 |
| 38 | ಯಾದಗಿರಿ | 13 | 14 | 118.18 | 371855 | 2 | 2 | 0.9 | 5875 |
| 39 | ಐಎಸ್‌ಡಿ | 12 | 19 | 21.75 | 3696000 | 2 | 4 | 0.45 | 15000 |
| | ಒಟ್ಟು | 4066 | 5531 | 21571.2 | 376470043 | 4970 | 6334 | 8006.897 | 533781381 |

## ಅನುಬಂಧ-2

**ಬೆಂಗಳೂರು ನಗರದಲ್ಲಿ ಯುವ ಜನತೆ ಹಾಗೂ ವಿದ್ಯಾರ್ಥಿಗಳು ಮಾದಕ ವ್ಯಸನಿಗಳಾಗದಂತೆ ತಡೆಗಟ್ಟಲು ಸರ್ಕಾರವು ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿರುತ್ತದೆ.**

- ಸಾರ್ವಜನಿಕರಿಂದ ರಹಸ್ಯ ಮಾಹಿತಿಗಳನ್ನು ಸಂಗ್ರಹಿಸಲು ಟೋಲ್ ಫ್ರೀ ಸಂಖ್ಯೆ 1908 ದೂರವಾಣಿಯ ಮುಖಾಂತರ ಸಂಪರ್ಕಿಸಿ ಮಾಹಿತಿ ನೀಡುವ ಯೋಜನೆ ಪ್ರಾರಂಭಿಸಲಾಗಿದೆ.
- ನಗರಕ್ಕೆ ಮಾದಕ ವಸ್ತುಗಳು(ಗಾಂಜಾ) ಸರಬರಾಜು ಆಗುವ ಮಾರ್ಗಗಳ ಮೇಲೆ ತೀವ್ರ ನಿಗಾವಣೆ ಇಟ್ಟು ಕಟ್ಟುನಿಟ್ಟಾದ ಕಾನೂನು ಕ್ರಮಗಳನ್ನು ಜರುಗಿಸಲಾಗುತ್ತಿದೆ. ಡಾರ್ಕ್‌ನೆಟ್ (Darknet), ಮುಖಾಂತರ ಡ್ರಗ್ಸ್ ಸರಬರಾಜು ಜಾಲವನ್ನು ಪತ್ತೆ ಮಾಡಿ ಕಾನೂನು ಕ್ರಮ ಕೈಗೊಳ್ಳಲಾಗಿರುತ್ತದೆ. ಅಲ್ಲದೆ, ವಿದೇಶಗಳಿಂದ ಪೋಸ್ಟಲ್/ಕೊರಿಯರ್ಸ್ ಮುಖಾಂತರ ನಗರಕ್ಕೆ ಡ್ರಗ್ಸ್ ಸರಬರಾಜು ಮಾಡುತ್ತಿದ್ದ ಜಾಲವನ್ನು ಸಹ ಭೇದಿಸಲಾಗಿದೆ.
- ನಗರದಲ್ಲಿ ಡ್ರಗ್ಸ್ ಅಕ್ರಮಗಳನ್ನು ಪರಿಣಾಮಕಾರಿಯಾಗಿ ನಿಯಂತ್ರಿಸುವ ಸಲುವಾಗಿ NCB, DRI, Customs, Railway, Education ಇಲಾಖೆಗಳ ಅಧಿಕಾರಿಗಳ ಸಮನ್ವಯ ಸಭೆಯನ್ನು ನಡೆಸಲಾಗಿದೆ.
- ಮಾದಕ ವಸ್ತುಗಳ ಮಾರಾಟ ಜಾಲವನ್ನು ನಿಯಂತ್ರಿಸಲು ಬೆಂಗಳೂರು ನಗರದ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಮಾದಕ ದ್ರವ್ಯ ವಹಿವಾಟನ್ನು ತಡೆಗಟ್ಟಲು ನಗರದ ಎಲ್ಲಾ ಪೊಲೀಸ್ ಠಾಣೆಗಳಿಗೆ ಸುತ್ತೋಲೆಯ ಮೂಲಕ ಸೂಚನೆಗಳನ್ನು ನೀಡಲಾಗಿದೆ.
- ಮಾದಕ ವಸ್ತುಗಳ ಅಕ್ರಮ ಸಾಗಾಣಿಕೆ ಮತ್ತು ಮಾರಾಟ ತಡೆಗಟ್ಟುವ ಸಲುವಾಗಿ, ಠಾಣಾ ಮಟ್ಟದಲ್ಲಿ ಗೌಪ್ಯ ಮಾಹಿತಿಯನ್ನು ಸಂಗ್ರಹಿಸಲಾಗುತ್ತಿದೆ.
- ಮಾದಕ ದ್ರವ್ಯ (ಡ್ರಗ್ಸ್) ಹಾವಳಿಯನ್ನು ತಡೆಗಟ್ಟಲು ಸೂಕ್ತ ನಿಗಾವಹಿಸಿ ಮಾದಕ ದ್ರವ್ಯಗಳ ಮಾರಾಟ ಮತ್ತೆ ಸೇವಿಸುವವರ ಬಗ್ಗೆ ಮಾಹಿತಿ ಸಂಗ್ರಹಿಸಲಾಗುತ್ತಿದ್ದು, ಈ ಬಗ್ಗೆ ಬಾತ್ಮಿದಾರರಿಗೂ ಸಹ ಮಾಹಿತಿಯನ್ನು ನೀಡುವಂತೆ ಸೂಚಿಸಿರುತ್ತದೆ.
- ಅಧಿಕಾರಿ, ಸಿಬ್ಬಂದಿಗಳಿಗೆ ಮಾದಕ ದ್ರವ್ಯ (ಡ್ರಗ್ಸ್)ಗಳ ಮಾರಾಟ ಮತ್ತು ಸೇವಿಸುವವರ ಬಗ್ಗೆ ಮಾಹಿತಿ ಸಂಗ್ರಹಿಸುವಂತೆ, ತಲೆಮರೆಸಿಕೊಂಡಿರುವ ಆರೋಪಿಗಳನ್ನು ಪತ್ತೆಹಚ್ಚಲು ಸೂಕ್ತ ತಿಳುವಳಿಕೆ ನೀಡಿ ಕರ್ತವ್ಯಕ್ಕೆ ನೇಮಕ ಮಾಡಲಾಗುತ್ತಿರುತ್ತದೆ.
- ಮಾದಕ ವಸ್ತುಗಳ ಕಾಯ್ದೆ ಅಡಿಯಲ್ಲಿ ದಾಖಲಾಗಿರುವ ಪ್ರಕರಣಗಳಲ್ಲಿ ತನಿಖೆಯಲ್ಲಿ ವೈಜ್ಞಾನಿಕ ವಿಧಾನಗಳನ್ನು ಅನುಸರಿಸಲು ತನಿಖಾಧಿಕಾರಿಗಳಿಗೆ ಅಗತ್ಯ ತರಬೇತಿ ಕಾರ್ಯಾಗಾರಗಳನ್ನು ಆಯೋಜಿಸಲಾಗುತ್ತಿದೆ.
- ಬಾರ್ ಮತ್ತು ರೆಸ್ಟೋರೆಂಟ್, ಕಾಫಿ-ಡೇ, ಪಬ್, ಡಾನ್ಸ್‌ಬಾರ್ ಮುಂತಾದ ಯುವಕರು ಹೆಚ್ಚಾಗಿ ಸೇರುವ ಸ್ಥಳಗಳು, ಶಾಲಾ ಕಾಲೇಜು ಆವರಣ, ಬಸ್ ನಿಲ್ದಾಣ ಹಾಗೂ ಇನ್ನಿತರೆ ಪ್ರದೇಶಗಳಲ್ಲಿ ಮಾದಕ ದ್ರವ್ಯ ವಸ್ತುಗಳನ್ನು ಮಾರಾಟ ಮಾಡುತ್ತಿರುವ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಿ ಕಾನೂನಿನ ರೀತಿ ಕ್ರಮ ಜರುಗಿಸಲಾಗುತ್ತಿದೆ.

- ➢ ಸಾರ್ವಜನಿಕರ ಗಮನ ಸೆಳೆಯಲು ಬ್ಯಾನರ್, ಪೋಸ್ಟರ್‌ಗಳನ್ನು ಜನಸಂದಣಿ ಇರುವ ಸ್ಥಳಗಳಲ್ಲಿ ಪ್ರದರ್ಶಿಸಿ ಕರಪತ್ರ ಹಂಚಲಾಗುತ್ತಿದೆ.
- ➢ ಶಾಲಾ ಕಾಲೇಜುಗಳು, ವಿದೇಶಿಯರು ವಾಸಿಸುತ್ತಿರುವ ಪ್ರದೇಶಗಳು, ಮತ್ತು ಕೊಳಚೆ ಪ್ರದೇಶಗಳಲ್ಲಿ ಸಾರ್ವಜನಿಕ ಸಭೆ, ಮೆರವಣಿಗೆಗಳನ್ನು ನಡೆಸುವುದರ ಮೂಲಕ ವ್ಯಾಪಕ ಪ್ರಚಾರ ಕೈಗೊಳ್ಳಲು ಹಾಗೂ ಸಾರ್ವಜನಿಕರಲ್ಲಿ ಮಾದಕ ವಸ್ತುಗಳ ಸೇವನೆ ವಿರುದ್ಧ ಜಾಗೃತಿ ಮೂಡಿಸಲು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.
- ➢ ಠಾಣಾ ಸರಹದ್ದಿನ ಬೀಟ್ ಮತ್ತು ಸಬ್-ಬೀಟ್‌ಗಳಲ್ಲಿ ಆಗ್ಗಿಂದಾಗ್ಗೆ ಸಭೆಯನ್ನು ನಡೆಸಿ ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.
- ➢ ಶಾಲಾ ಕಾಲೇಜುಗಳಿಗೆ ಭೇಟಿ ನೀಡಿ ವಿದ್ಯಾರ್ಥಿಗಳಿಗೆ ಮಾದಕ ವಸ್ತುಗಳ ಸೇವನೆಯಿಂದ ಆಗುವ ದುಷ್ಪರಿಣಾಮಗಳ ಬಗ್ಗೆ ವಿದ್ಯಾರ್ಥಿಗಳಿಗೆ ಉಪನ್ಯಾಸದ ಮೂಲಕ ಹರಿವು ಮೂಡಿಸಲಾಗುತ್ತಿದೆ.
- ➢ ಶಾಲಾ ಕಾಲೇಜುಗಳ ಹತ್ತಿರ ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಮಾದಕ ವಸ್ತುಗಳನ್ನು ಮಾರಾಟ ಮಾಡುತ್ತಿರುವ ಹಾಗೂ ಅಲ್ಲಿಯೇ ಸಾರ್ವಜನಿಕವಾಗಿ ಮಾದಕ ವಸ್ತು ಸೇವನೆ ಮಾಡುವವರ ವಿರುದ್ಧ ದಂಡವನ್ನು ವಿಧಿಸುವುದರ ಮೂಲಕ ಸಾರ್ವಜನಿಕ ಸ್ಥಳಗಳಲ್ಲಿ ಸೇವನೆ ಮಾಡುವುದನ್ನು ತಡೆಗಟ್ಟುವುದು ಮತ್ತು ಜಾಗೃತಿ ಮೂಡಿಸುವುದರ ಬಗ್ಗೆ ಹೆಚ್ಚಿನ ಗಮನ ಹರಿಸಲು ಸೂಚಿಸಲಾಗಿದೆ.
- ➢ ವಿದೇಶಿಯರು ವಿಶೇಷವಾಗಿ ನೈಜೀರಿಯ ಪ್ರಜೆಗಳು ಮಾದಕ ವಸ್ತುಗಳ ಮಾರಾಟ/ಸೇವನೆಯ ಪ್ರಕರಣಗಳಲ್ಲಿ ಆರೋಪಿಗಳಿಗೆ ಯಾವ ಮೂಲಗಳಿಂದ ಮಾದಕ ವಸ್ತುಗಳ ಸರಬರಾಜಾಗುತ್ತಿರುವ ಬಗ್ಗೆ ಸಂಪೂರ್ಣ ಮಾಹಿತಿ ಸಂಗ್ರಹಿಸಲು ಸೂಚಿಸಲಾಗಿದೆ.
- ➢ ಇಂತಹ ಕೃತ್ಯಗಳಲ್ಲಿ ತೊಡಗಿರುವ ವಿದೇಶಿಯರನ್ನು ದಸ್ತಗಿರಿ ಮಾಡಿ ಅವರುಗಳ ಪಾಸ್‌ಪೋರ್ಟ್‌ಗಳನ್ನು ಮುಟ್ಟುಗೋಲು ಹಾಕಿಕೊಂಡು ಕಾನೂನಿನ ಕ್ರಮ ಕೈಗೊಳ್ಳಲಾಗುತ್ತಿದೆ.
- ➢ ವಿದೇಶಿಯರು ವಾಸದ ಬಗ್ಗೆ ಮಾಹಿತಿಯನ್ನು ಸಂಬಂಧಪಟ್ಟ ಪೊಲೀಸ್ ಠಾಣೆಗಳಿಗೆ ಒದಗಿಸುವಂತೆ ಮನೆ ಮಾಲೀಕರುಗಳಿಗೆ ಸೂಚನೆಗಳನ್ನು ನೀಡಲಾಗಿರುತ್ತದೆ.
- ➢ ವಿಶೇಷ ಕಾರ್ಯಾಚರಣೆಗಳನ್ನು ನಡೆಸಿ ಇಂತಹ ಕೃತ್ಯವೆಸಗುವಂತಹವರ ವಿರುದ್ಧ ಕಠಿಣ ಕಾನೂನಿನ ಕ್ರಮ ಕೈಗೊಳ್ಳಲಾಗುತ್ತಿದೆ.
- ➢ ಒಂದು ಬಾರಿಗಿಂತ ಹೆಚ್ಚು ಬಾರಿ ಎನ್.ಡಿ.ಪಿ.ಎಸ್. ಪ್ರಕರಣಗಳಲ್ಲಿ ಬಾಗಿಯಾದ ಆರೋಪಿತರಿಗೆ PIT-NDPS ಹಾಗೂ ಗೂಂಡಾಕಾಯ್ದೆ ಅಡಿಯಲ್ಲಿ ಕ್ರಮ ಜರುಗಿಸಲಾಗುತ್ತಿದೆ.
- ➢ 2020-2021ನೇ ಸಾಲಿನಲ್ಲಿ ಇಬ್ಬರು ವಿದೇಶಿಯರು ಹಾಗೂ ಇಬ್ಬರು ಸ್ಥಳೀಯ ಡ್ರಗ್ಸ್ ಪೆಡ್ಲರ್‌ಗಳನ್ನು PIT-NDPS ಅಡಿಯಲ್ಲಿ ಬಂಧನಕ್ಕೆ ಆದೇಶ ಮಾಡಲಾಗಿದೆ.
- ➢ ಠಾಣಾ ಸರಹದ್ದುಗಳಲ್ಲಿ ಹೊಯ್ಸಳ, ಚೀತಾ, ಅಧಿಕಾರಿ ಮತ್ತು ಸಿಬ್ಬಂದಿಗಳು ಗಸ್ತಿನಲ್ಲಿರುವ ಸಮಯದಲ್ಲಿ ಶಾಲಾ, ಕಾಲೇಜುಗಳ ಬಳಿ ಸೂಕ್ಷ್ಮವಾಗಿ ಗಮನಿಸಿ ಅಪರಿಚಿತ ವ್ಯಕ್ತಿಗಳ ಮಾಹಿತಿ ಸಂಗ್ರಹಿಸುವಂತೆ ಸೂಚಿಸಲಾಗಿದೆ.
- ➢ ಮಾದಕ ದ್ರವ್ಯ ಪದಾರ್ಥಗಳ ವಹಿವಾಟನ್ನು ತಡೆಗಟ್ಟಲು ಹಾಗೂ ಪತ್ತೆ ಮಾಡಲು ಹಾಗೂ ಹದಿಹರೆಯದ ಯುವಕ ಮತ್ತು ಯುವತಿಯರನ್ನು ಇಂತಹ ದುಶ್ಚಟಗಳಿಂದ ತಡೆಗಟ್ಟುವ ಸಲುವಾಗಿ ಎಲ್ಲಾ ರೀತಿಯ ಸಾಧ್ಯವಿರುವ ಪ್ರಯತ್ನಗಳನ್ನು ಮಾಡಲಾಗುತ್ತಿದೆ.